# ರಾಮಕೃಷ್ಣ ಸುದ್ದಿ ಸಂಚಯ

## ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com    Email : ho@ramakrishnacredit.com

ಸಂಪುಟ : 1    ಸಂಚಿಕೆ : 2    ಒಬ್ಬನು ಎಲ್ಲರಿಗಾಗಿ, ಎಲ್ಲರೂ ಒಬ್ಬನಿಗಾಗಿ    ಜುಲೈ – ಸಪ್ಟೆಂಬರ್ 2015


## ಅಧ್ಯಕ್ಷರ ಮಾತು



ಸಂಘದ ಸ್ಥಾಪಕಾಧ್ಯಕ್ಷರಾದ ಶ್ರೀ ಕೆ.ಬಿ. ಜಯಪಾಲ ಶೆಟ್ಟಿಯವರು ದಿನಾಂಕ 8.8.2015 ದೈವಾಧೀನರಾಗಿರುವರು.

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ–ಓಪರೇಟಿವ್ ಸೊಸೈಟಿಯನ್ನು 1994ರಲ್ಲಿ ಹುಟ್ಟುಹಾಕಿ, ದ.ಕ. ಹಾಗೂ ಉಡುಪಿ ಜಿಲ್ಲೆಗೆ ಸಂಘದ ಕಾರ್ಯ ವ್ಯಾಪ್ತಿಯನ್ನು ವಿಸ್ತರಿಸಿ, ಪ್ರಸ್ತುತ ಉತ್ತಮ ಸಹಕಾರ ಸಂಘವೆಂದು ಇಲಾಖೆ ಹಾಗೂ ಸದಸ್ಯರ ಹೆಗ್ಗಳಿಕೆಗೆ ಪಾತ್ರವಾಗಲು ದಿ| ಕೆ.ಬಿ. ಜಯಪಾಲ ಶೆಟ್ಟಿಯವರ ನಿಸ್ವಾರ್ಥ ಸೇವೆ, ದಕ್ಷನಾಯಕತ್ವವು ಕಾರಣವಾಗಿದೆ.

ಶ್ರೀಯುತರಿಗೆ ದಿನಾಂಕ 6.10.2015 ರಂದು ಜರಗಿದ ಸಂಘದ 21ನೇ ಮಹಾಸಭೆಯಲ್ಲಿ ಭಾವಪೂರ್ವಕ ಶ್ರದ್ಧಾಂಜಲಿಯನ್ನು ಸಮರ್ಪಿಸ ಲಾಯಿತು. ಅಂತೆಯೇ ಅವರ ಗೌರವ ಸೂಚಕವಾಗಿ ಅವರ ಭಾವಚಿತ್ರವನ್ನು ಸಂಘದ ಕೇಂದ್ರ ಕಛೇರಿ ಮತ್ತು ಎಲ್ಲಾ ಶಾಖೆಗಳಲ್ಲಿ ಅನಾವರಣಗೊಳಿಸಲಾಗಿದೆ.

ದಿನಾಂಕ 1.4.2015ರಿಂದ ಸಂಘದ ನಿರ್ದೇಶಕ ರಾದ ಶ್ರೀ ಬಿ. ರಂಗನಾಥ ಶೆಟ್ಟಿಯವರು ದಿನಾಂಕ 31.7.2015 ರಂದು ನಿಧನರಾದರು. ಅವರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ.

2014–15ನೇ ಸಾಲಿನಲ್ಲಿ ಸಂಘವು ಸಾಧಿಸಿದ ಸರ್ವತೋಮುಖ ಪ್ರಗತಿಯನ್ನು ಪರಿಗಣಿಸಿ ಎಸ್.ಡಿ.ಸಿ.ಸಿ. ಬ್ಯಾಂಕ್ "ಸಾಧನಾ ಪ್ರಶಸ್ತಿ 2014–15" ನೀಡಿ ಗೌರವಿಸಿರುವುದು ಬಹಳ ಹೆಮ್ಮೆಯ ವಿಷಯ. ಇದಕ್ಕೆ ಸಂಘದ ಎಲ್ಲಾ ನಿರ್ದೇಶಕರಿಗೆ, ಸದಸ್ಯರಿಗೆ, ಸಿಬ್ಬಂದಿ ವರ್ಗ ಹಾಗೂ ಹಿತೈಷಿಗಳಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

30.9.2015ಕ್ಕೆ ಮುಕ್ತಾಯಗೊಂಡ 2015– 16ನೇ ಸಾಲಿನ ಅರ್ಧ ವಾರ್ಷಿಕ ಅವಧಿಯಲ್ಲಿ ಸಂಘವು ಹಿಂದಿನ ಸಾಲಿನಂತೆ ಉತ್ತಮ ಪ್ರಗತಿಯನ್ನು ಸಾಧಿಸಿದೆ. ಆದರೆ ಸಾಲ ಮತ್ತು ಮುಂಗಡವು ನಿರೀಕ್ಷಿತ ಮಟ್ಟಕ್ಕೆ ಬಂದಿರುವುದಿಲ್ಲ. ಈ ನಿಟ್ಟಿನಲ್ಲಿ ಎಲ್ಲಾ ಶಾಖೆಗಳು ಈಗಿಂದಲೇ ಕ್ರಮ ತೆಗೆದುಕೊಂಡು ಮುಂದಿನ ದಿನಗಳಲ್ಲಿ ಉತ್ತಮ ಪ್ರಗತಿಯನ್ನು ಸಾಧಿಸಲು ನಮ್ಮೊಂದಿಗೆ ಸಹಕರಿಸತಕ್ಕದ್ದು.

2015–16ನೇ ಸಾಲಿನ ಅರ್ಧವಾರ್ಷಿಕ ಅವಧಿಯಲ್ಲಿ ವಿಟ್ಲ ಮತ್ತು ವೆಲೆನ್ಸಿಯಾ ಶಾಖೆಗಳು ನಿಗದಿತ ಎಲ್ಲಾ ಗುರಿಗಳನ್ನು ತಲುಪಿ ಉತ್ತಮ ಪ್ರಗತಿಯನ್ನು ಸಾಧಿಸಿರುತ್ತಾರೆ. ಆ ಶಾಖೆಗಳ ಉಸ್ತುವಾರಿ ನಿರ್ದೇಶಕರಿಗೆ, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರಿಗೆ ಮತ್ತು ಶಾಖಾಧಿಕಾರಿ ಹಾಗೂ ಎಲ್ಲಾ ಸಿಬ್ಬಂದಿಗಳಿಗೆ ನಮ್ಮ ತುಂಬು ಹೃದಯದ ಅಭಿನಂದನೆಗಳು.



## ಸ್ಥಾಪಕಾಧ್ಯಕ್ಷ ದಿ| ಕೆ.ಬಿ. ಜಯಪಾಲ ಶೆಟ್ಟಿಯವರಿಗೆ ಶ್ರದ್ಧಾಂಜಲಿ



ಸಂಘದ ಸ್ಥಾಪಕಾಧ್ಯಕ್ಷರಾಗಿ 20 ವರ್ಷ ಕಾಲ ಸಂಘವನ್ನು ಯಶಸ್ವಿಯಾಗಿ ಮುನ್ನಡೆಸಿ ಸಂಘದ ಸರ್ವತೋಮುಖ ಪ್ರಗತಿಗೆ ಕಾರಣಕರ್ತರಾದ ನಮ್ಮೆಲ್ಲರ ಹಿರಿಯರೂ, ಮಾರ್ಗದರ್ಶಕರೂ ಆದ ಶ್ರೀ ಕೆ.ಬಿ. ಜಯಪಾಲ ಶೆಟ್ಟಿಯವರು ದಿನಾಂಕ 8.8.2015ರಂದು ದೈವಾಧೀನರಾದರು. ಶ್ರೀಯುತರ ಗೌರವಾರ್ಥ ದಿನಾಂಕ 10.8.2015 ರಂದು ಸಂಘದ ಕೇಂದ್ರ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆಯನ್ನು ಜರಗಿಸಲಾಯಿತು. ಸಭೆಯಲ್ಲಿ ದಿ| ಕೆ.ಬಿ. ಜಯಪಾಲ ಶೆಟ್ಟಿಯವರ ಗುಣಗಾನವನ್ನು ಮಾಡಿ ಅವರು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅವರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಂಘಕ್ಕೆ ಸಾಧನಾ ಪ್ರಶಸ್ತಿ 2014–15



ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕು ಮಂಗಳೂರು ಇವರು ಸಂಘವು ಸಾಧಿಸಿದ ಸರ್ವತೋಮುಖ ಅಭಿವೃದ್ಧಿಯನ್ನು ಪರಿಗಣಿಸಿ ಸಂಘಕ್ಕೆ "ಸಾಧನಾ ಪ್ರಶಸ್ತಿ 2014–15"ನ್ನು ನೀಡಿ ಗೌರವಿಸಿತು. ದಿನಾಂಕ 12/09/2015 ರಂದು ಜರಗಿದ ಎಸ್‌ಸಿಡಿಸಿಸಿ ಬ್ಯಾಂಕಿನ ಮಹಾಸಭೆಯಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಂ.ಎನ್. ರಾಜೇಂದ್ರ ಕುಮಾರ್‌ರವರು ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರಿಗೆ ಮತ್ತು ಪ್ರಭಾರ ಮಹಾಪ್ರಬಂಧಕರಾದ ಶ್ರೀ ಗಣೇಶ್. ಜಿ.ಕೆ. ಯವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಸಂಘಕ್ಕೆ ಜಿಲ್ಲಾ ಬ್ಯಾಂಕಿನ ಪ್ರಶಸ್ತಿ 5ನೇ ಬಾರಿಗೆ ಲಭಿಸಿದೆ.

## ಮಂಗಳೂರು ಶಾಖೆಯಲ್ಲಿ ಗಣಕೀಕೃತ ಪಾಸ್‌ಬುಕ್ ಸೌಲಭ್ಯಕ್ಕೆ ಚಾಲನೆ



ಸಂಘದ ಮಂಗಳೂರು ಶಾಖೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಉಳಿತಾಯ ಖಾತೆಗಳ ಗಣಕೀಕೃತ ಪಾಸ್ ಬುಕ್ ಮುದ್ರಣ ಸೌಲಭ್ಯವನ್ನು ಅಳವಡಿಸಲಾಗಿದ್ದು ಇದರ ಉದ್ಘಾಟನೆಯನ್ನು ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಇತ್ತೀಚೆಗೆ ನೆರವೇರಿಸಿದರು.

### ಸುಳ್ಯ ಶಾಖೆಯಲ್ಲಿ ಗಣಕೀಕೃತ ಪಾಸ್‌ಬುಕ್ ಸೌಲಭ್ಯಕ್ಕೆ ಚಾಲನೆ



ಸಂಘದ ಸುಳ್ಯ ಶಾಖೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಉಳಿತಾಯ ಖಾತೆಗಳ ಗಣಕೀಕೃತ ಪಾಸ್ ಬುಕ್ ಮುದ್ರಣ ಸೌಲಭ್ಯವನ್ನು ಅಳವಡಿಸಲಾಗಿದ್ದು ಇದರ ಉದ್ಘಾಟನೆಯನ್ನು ಇತ್ತೀಚೆಗೆ ಶಾಖಾ ಸಲಹಾ ಸಮಿತಿ ಸದಸ್ಯರಾದ ದಯಾನಂದ ಆಳ್ವರವರು ನೆರವೇರಿಸಿದರು.

### ಕುಂದಾಪುರ ಶಾಖೆಯಲ್ಲಿ ಗಣಕೀಕೃತ ಪಾಸ್‌ಬುಕ್ ಸೌಲಭ್ಯಕ್ಕೆ ಚಾಲನೆ



ಸಂಘದ ಕುಂದಾಪುರ ಶಾಖೆಯಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಉಳಿತಾಯ ಖಾತೆಗಳ ಗಣಕೀಕೃತ ಪಾಸ್ ಬುಕ್ ಮುದ್ರಣ ಸೌಲಭ್ಯವನ್ನು ಅಳವಡಿಸಲಾಗಿದ್ದು ಇದರ ಉದ್ಘಾಟನೆಯನ್ನು ಇತ್ತೀಚೆಗೆ ಶಾಖಾ ಸಲಹಾ ಸಮಿತಿ ಸದಸ್ಯರಾದ ದಯಾನಂದ ಆಳ್ವರವರು ನೆರವೇರಿಸಿದರು.

### ಸಂಘದ ಸಪ್ಟೆಂಬರ್ 2015ರ ಪ್ರಗತಿ ವಿವರ

| ಕ್ರ.ಸಂ. | ವಿವರ | 30.09.2015ಕ್ಕೆ ಇದ್ದಂತೆ |
|---|---|---|
| 1 | ಠೇವಣಾತಿಗಳು | ರೂ. 123.24 Cr. |
| 2 | ಸಾಲ ಮತ್ತು ಮುಂಗಡ | ರೂ. 84.61 Cr. |
| 3 | ಒಟ್ಟು ಅನುತ್ಪಾದಕ ಆಸ್ತಿ | |
| | 1) ಮೊಬಲಗು | ರೂ. 25.58 Lakhs |
| | 2) ಶೇಕಡ | 0.30 % |
| 4 | ನಿವ್ವಳ ಅನುತ್ಪಾದಕ ಆಸ್ತಿ | NIL |
| 5 | ನಿವ್ವಳ ಲಾಭ | ರೂ. 1.11 Cr. |
| 6 | ಒಟ್ಟು ವ್ಯವಹಾರ | ರೂ. 207.85 Cr. |

# ಸಂಘದ ಮಹಾಸಭೆ ಶೇ.20 ಡಿವಿಡೆಂಡ್ ಘೋಷಣೆ



ಸಂಘವು 2014–15ನೇ ಸಾಲಿನಲ್ಲಿ ತೃಪ್ತಿದಾಯಕ ಪ್ರಗತಿಯೊಂದಿಗೆ ರೂ.2.81 ಕೋಟಿ ಲಾಭ ಗಳಿಸಿದ್ದು, ಶ್ರೀ ಕೆ. ಜೈರಾಜ್ ಬಿ. ರೈ ರವರ ಅಧ್ಯಕ್ಷತೆಯಲ್ಲಿ ದಿನಾಂಕ 06.09.2015 ರಂದು ಜರಗಿದ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರಿಗೆ ಶೇ.20 ಡಿವಿಡೆಂಡ್ ಘೋಷಿಸಲಾಗಿದೆ.

ನಿರ್ದೇಶಕರಾದ ಶ್ರೀ ಕೆ. ಸೀತಾರಾಮ ರೈ ಸವಣೂರು ರವರು ಸ್ವಾಗತಿಸಿ, ಸಂಘದ ಅಧ್ಯಕ್ಷರಾದ ಶ್ರೀ ಕೆ.ಜೈರಾಜ್ ಬಿ. ರೈ ಯವರು ವಾರ್ಷಿಕ ವರದಿಯನ್ನು, ಕಾರ್ಯಯೋಜನೆಯನ್ನು ಮಂಡಿಸಿ, ಸದಸ್ಯರ ಸಲಹೆ ಸೂಚನೆಗಳಿಗೆ ಉತ್ತರಗಳನ್ನು ನೀಡಿದರು. ಪ್ರಭಾರ ಮಹಾಪ್ರಬಂಧಕ ಗಣೇಶ್ ಜಿ.ಕೆ.ಯವರು ಲೆಕ್ಕ ಪರಿಶೋಧಿತ ಆರ್ಥಿಕ ತಃಖ್ತೆಗಳನ್ನು, ಲಾಭ ವಿಂಗಡನೆ ಪ್ರಸ್ತಾಪ, ಬಜೆಟ್ ಹಾಗೂ ಬೈಲಾ ತಿದ್ದುಪಡಿ ಪ್ರಸ್ತಾವನೆಯನ್ನು ಮಂಡಿಸಿದರು.

ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿಜಯಪಾಲ ಶೆಟ್ಟಿ, ನಿರ್ದೇಶಕರುಗಳಾದ ಡಾ। ಕೆ ಸುಭಾಶ್ಚಂದ್ರ ಶೆಟ್ಟಿ, ವಿಠಲ ಪಿ. ಶೆಟ್ಟಿ, ಎಂ. ಸೀತಾರಾಮ ಶೆಟ್ಟಿ, ಅರುಣ್‌ಕುಮಾರ್ ಶೆಟ್ಟಿ, ಪಿ.ಬಿ.ದಿವಾಕರ ರೈ, ರವೀಂದ್ರ ನಾಥ ಜಿ. ಹೆಗ್ಡೆ, ಕೆ.ದಯಾಕರ್ ಆಳ್ವ ಮತ್ತು ಪ್ರಸಾದ್ ಕೌಶಲ್ ಶೆಟ್ಟಿ ಉಪಸ್ಥಿತರಿದ್ದರು. ನಿರ್ದೇಶಕರಾದ ಎಂ. ರಾಮಯ ಶೆಟ್ಟಿ ಯವರು ವಂದಿಸಿದರು. ಸಿಬ್ಬಂದಿಗಳಾದ ಶ್ರೀಮತಿ ಜ್ಯೋತಿ ಮತ್ತು ಶ್ರೀಮತಿ ಸವಿತಾರವರು ಪ್ರಾರ್ಥಿಸಿ, ಮೋಹನ್‌ದಾಸ್ ಶೆಟ್ಟಿ ಹಾಗೂ ಪ್ರಶಾಂತ್ ಪಿ.ಎ. ಕಾರ್ಯಕ್ರಮ ನಿರೂಪಿಸಿದರು.

**ಸಂಘದ ಸದಸ್ಯರಲ್ಲಿ ಕೋರಿಕೆ:** ಸಕಾಲದಲ್ಲಿ ಡಿವಿಡೆಂಟ್ ಪಾವತಿಗೆ ಸಹಕಾರಿಯಾಗುವಂತೆ, ಸಂಘದಲ್ಲಿ ಉಳಿತಾಯ ಖಾತೆ ಹೊಂದಿರದ ಸದಸ್ಯರು ಉಳಿತಾಯ ಖಾತೆಯನ್ನು ತೆರೆಯುವುದು, ಉಳಿತಾಯ ಖಾತೆಯನ್ನು ತೆರೆಯಲು ಸಾಧ್ಯವಿಲ್ಲದ ಸದಸ್ಯರು ತಮ್ಮ ಬ್ಯಾಂಕು ಖಾತೆಯ ವಿವರವನ್ನು ಸಂಘಕ್ಕೆ ನೀಡುವುದು.

### ಸಿಬ್ಬಂದಿ ವರ್ಗಾವಣೆ

| ಸಿಬ್ಬಂದಿ ಹೆಸರು | ಪದ ನಾಮ | ವರ್ಗಾವಣೆ ಗೊಂಡ ಶಾಖೆ |
|---|---|---|
| ಶ್ರೀಮತಿ ಲಕ್ಷ್ಣಾ ಶೆಟ್ಟಿ | ಅಕೌಂಟೆಂಟ್ | ವೆಲೆನ್ಸಿಯಾ |
| ಶ್ರೀಮತಿ ನಂದಿತಾ ಆಚಾರ್ಯ | ಅಕೌಂಟೆಂಟ್ | ಚಿಲಿಂಬಿ |

## ಸಂಘದ ಸುದ್ದಿ ಪತ್ರಿಕೆಯ ಮೊದಲನೆ ಸಂಚಿಕೆ ಬಿಡುಗಡೆ



ಸಂಘದ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ 'ರಾಮಕೃಷ್ಣ ಸುದ್ದಿ ಸಂಚಯ'ದ ಮೊದಲ ಸಂಚಿಕೆಯನ್ನು ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ದಿನಾಂಕ 28.7.2015ರಂದು ಬಿಡುಗಡೆಗೊಳಿಸಿದರು.

## ವಿವಿಧ ಸೌಲಭ್ಯಗಳ ಅಳವಡಿಕೆ

1. ಎಲ್ಲಾ ಶಾಖೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ
2. ಎಲ್ಲಾ ಶಾಖೆಗಳಿಗೆ Laser Printer ಅಳವಡಿಕೆ.
3. ಸಿಬ್ಬಂದಿಗಳಿಗೆ ಗುರುತಿನ ಕಾರ್ಡ್.
4. ಮಂಗಳೂರು, ಸುಳ್ಯ ಮತ್ತು ಕುಂದಾಪುರ ಶಾಖೆಗಳಿಗೆ ಉಳಿತಾಯ ಖಾತೆ ಪಾಸ್‌ಬುಕ್ ಪ್ರಿಂಟರ್ ಅಳವಡಿಕೆ.

## ಹೆಬ್ರಿ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾಗಿ ನಿರ್ದೇಶಕರಾದ ಸಿ.ಎ. ಎಚ್.ಆರ್. ಶೆಟ್ಟಿ ಆಯ್ಕೆ

ಹೆಬ್ರಿ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾಗಿ ಶಾಖಾ ಉಸ್ತುವಾರಿ ನಿರ್ದೇಶಕರಾದ ಸಿಎ ಎಚ್.ಆರ್. ಶೆಟ್ಟಿಯವರನ್ನು ನಿಯೋಜಿಸಲಾಯಿತು. ಹೆಬ್ರಿ ಶಾಖಾ ಸಲಹಾ ಸಮಿತಿಯ ಹಿಂದಿನ ಅಧ್ಯಕ್ಷರಾದ ಶ್ರೀ ಎಚ್. ಪ್ರಸನ್ನ ಬಲ್ಲಾಳ್‌ರವರು ಶಾಖೆಯ ಪ್ರಾರಂಭದಿಂದ ಶಾಖಾ ಸಲಹಾ ಸಮಿತಿ ಅಧ್ಯಕ್ಷರಾಗಿದ್ದು ಶಾಖೆಯ ಬೆಳವಣಿಗೆಗೆ ನೀಡಿದ ಸೇವೆಯನ್ನು ಸ್ಮರಿಸಿ, ಅವರಿಗೆ ಸಂಘದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದೇವೆ.

ವಿ.ಸೂ.: ಈ ಪತ್ರಿಕೆಯಲ್ಲಿ ಪ್ರಕಟಿಸುವರೆ ತಮ್ಮ ಹಾಗೂ ತಮ್ಮ ಕುಟುಂಬ ಸದಸ್ಯರ ಜನ್ಮ ದಿನಾಂಕ, ವಿವಾಹ ದಿನಾಂಕ, ಸಾಧನೆಯ ವಿವರ ನಮ್ಮ ಕೇಂದ್ರ ಕಛೇರಿಗೆ ಕಳುಹಿಸಲು ನಿರ್ದೇಶಕರನ್ನು, ಸಿಬ್ಬಂದಿಗಳನ್ನು ಕೋರಲಾಗಿದೆ. ವಿಷಯಗಳ ಪ್ರಕಟಣೆಯು ಪತ್ರಿಕೆಯ ಸ್ಥಳಾವಕಾಶಕ್ಕೆ ಹೊಂದಿಕೊಂಡಿರುತ್ತದೆ.

## ಹುಟ್ಟು ಹಬ್ಬದ ಶುಭಾಶಯಗಳು

ಅಕ್ಟೋಬರ್ 2015 ರಿಂದ ಡಿಸೆಂಬರ್ 2015ರ ಅವಧಿಯಲ್ಲಿ ಜನ್ಮದಿನವನ್ನು ಆಚರಿಸುವ ತಮಗೆಲ್ಲರಿಗೂ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

| ಸಿಬ್ಬಂದಿಗಳ ಹೆಸರು | ಶಾಖೆ |
|---|---|
| ಶ್ರೀಮತಿ ಯಶೋದ ಪಿ. ನಾಯ್ಕ್ | ಉಡುಪಿ |
| ಶ್ರೀ ಅಣ್ಣಪ್ಪ ಶೆಟ್ಟಿ | ಬೈಂದೂರು |
| ಶ್ರೀ ಸಂತೋಷ್ | ಬೈಂದೂರು |
| ಶ್ರೀಮತಿ ನಂದಿತ ಆಚಾರ್ಯ | ಚಿಲಿಂಬಿ |
| ಶ್ರೀಮತಿ ಸವಿತಾ ಎಂ. ಪೂಂಜಾ | ಮಂಗಳೂರು |

## ಸ್ಥಾಪಕಾಧ್ಯಕ್ಷ ಶ್ರೀ ಕೆ.ಬಿ. ಜಯಪಾಲ ಶೆಟ್ಟಿ ಇವರ ಭಾವಚಿತ್ರ ಅನಾವರಣ



ಸ್ಥಾಪಕಾಧ್ಯಕ್ಷ ಶ್ರೀ ಕೆ.ಬಿ. ಜಯಪಾಲ ಶೆಟ್ಟಿಯವರ ಭಾವಚಿತ್ರವನ್ನು ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈ ಯವರು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ಜಯಪಾಲ ಶೆಟ್ಟಿಯವರು, ನಿರ್ದೇಶಕರುಗಳು ಹಾಗೂ ಮಹಾಪ್ರಬಂಧಕರು ಉಪಸ್ಥಿತರಿದ್ದರು.

ಶ್ರೀ ಕೆ.ಬಿ. ಜಯಪಾಲ ಶೆಟ್ಟಿಯವರ ಭಾವಚಿತ್ರವನ್ನು ಸಂಘದ ಎಲ್ಲಾ ಶಾಖೆಗಳಲ್ಲಿ ಅನಾವರಣಗೊಳಿಸಲಾಗಿದೆ.

## ನಿರ್ದೇಶಕರಾದ ದಿ| ಬಿ. ರಂಗನಾಥ ಹೆಗ್ಡೆಯವರಿಗೆ ಶ್ರದ್ಧಾಂಜಲಿ



ನಮ್ಮ ಸಂಘದ ನಿರ್ದೇಶಕರು ಹಾಗೂ ಬಿ.ಸಿ.ರೋಡ್ ಶಾಖಾ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ರಂಗನಾಥ ಹೆಗ್ಡೆಯವರು ದಿನಾಂಕ 31.07.2015 ರಂದು ದೈವಾಧೀನರಾದರು. ಶ್ರೀಯುತರ ಗೌರವಾರ್ಥ ದಿನಾಂಕ 3.8.2015ರಂದು ಸಂಘದ ಕೇಂದ್ರ ಕಛೇರಿಯಲ್ಲಿ ಶ್ರೀ ಕೆ. ಜೈರಾಜ್ ಬಿ. ರೈ ಯವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಸಭೆಯನ್ನು ಜರಗಿಸಲಾಯಿತು. ಸಭೆಯಲ್ಲಿ ದಿ| ಬಿ. ರಂಗನಾಥ ಹೆಗ್ಡೆಯವರ ಗುಣಗಾನವನ್ನು ಮಾಡಿ ಅವರು ಸಂಘಕ್ಕೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸಿ ಅವರಿಗೆ ಶೃದ್ಧಾಂಜಲಿಯನ್ನು ಅರ್ಪಿಸಿ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಲಾಯಿತು. ಈ ಸಂದರ್ಭದಲ್ಲಿ ಸಂಘದ ನಿರ್ದೇಶಕರುಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ದಿ| ಡಿ.ಎ. ನಾಯಕ್‌ರವರಿಗೆ ಶ್ರದ್ಧಾಂಜಲಿ

ಸಂಘದ ಸುರತ್ಕಲ್ ಶಾಖೆಯ ಶಾಖಾ ಸಲಹಾ ಸಮಿತಿ ಸದಸ್ಯರಾದ ಶ್ರೀ ಡಿ.ಎ. ನಾಯಕ್‌ರವರು ದಿನಾಂಕ . .2015 ರಂದು ದೈವಾಧೀನರಾಗಿರುವರು. ಅವರ ನಿಧನಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಕೆ. ಜೈರಾಜ್ ಬಿ. ರೈಯವರು ಸಂತಾಪ ವ್ಯಕ್ತಪಡಿಸಿದರು. ದಿ| ಡಿ.ಎ. ನಾಯಕ್‌ರವರಿಗೆ ಸಂಘದ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸಿ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಿದ್ದೇವೆ.

# 2014–15ನೇ ಸಾಲಿನಲ್ಲಿ ಅತ್ಯುತ್ತಮ ಶಾಖಾ ಪ್ರಶಸ್ತಿ ವಿಜೇತ ಶಾಖೆಗಳು

## ವಿಭಾಗ-1



ಪ್ರಥಮ : ಕುಂದಾಪುರ



ದ್ವಿತೀಯ : ಹೆಬ್ರಿ

## ವಿಭಾಗ-2



ಪ್ರಥಮ : ವಿಟ್ಲ



ದ್ವಿತೀಯ : ಉಪ್ಪಿನಂಗಡಿ

**ಮಹಾ ಸಭೆಯಲ್ಲಿ ಅತ್ಯುತ್ತಮ ಶಾಖಾ ಪ್ರಶಸ್ತಿ ಸ್ವೀಕರಿಸಿದ ಶಾಖಾ ಸಲಹಾ ಸಮಿತಿ ಅಧ್ಯಕ್ಷರಿಗೆ ಶಾಖಾ ಪ್ರಬಂಧಕರಿಗೆ ಹಾಗೂ ಉಸ್ತುವಾರಿ ನಿರ್ದೇಶಕರಿಗೆ ಹಾರ್ದಿಕ ಅಭಿನಂದನೆಗಳು.**

Private Circulation only

**BOOK-POST**

**To,**

If not delivered please return to :

**SRI RAMAKRISHNA CREDIT CO-OP. SOCIETY LTD.**
2nd Floor, Amruthotsava Building, Bunts Hostel Circle, Mangalore - 575 003.